**ದಿನಾಂಕ:13–01–2017ರಂದು ಮಧ್ಯಾಹ್ನ 3–00ಗಂಟೆಗೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಒಗ್ಗೂಡಿಸುವಿಕೆ ಪ್ರಗತಿ ಪರಿಶೀಲನಾ ಸಭೆಯ ನಡವಳಿ**

*****

**ಹಾಜರಿದ್ದವರು:**

1) ಉಪ ಕಾರ್ಯದರ್ಶಿ (ಅಭಿವೃದ್ಧಿ), ಜಿ.ಪಂ. ತುಮಕೂರು
2) ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಇಲಾಖಾಧಿಕಾರಿಗಳು (ಹಾಜರಾತಿ ವಹಿಯಲ್ಲಿರುವಂತೆ)

***

ಸಭೆಯ ಪ್ರಾರಂಭದಲ್ಲಿ ಉಪ ಕಾರ್ಯದರ್ಶಿ (ಅಭಿವೃದ್ಧಿ) ಜಿ.ಪಂ. ತುಮಕೂರು ರವರು ಸಭೆಯಲ್ಲಿ ಹಾಜರಿದ್ದ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿ, ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡುವಂತೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಲ್ಲಿ ವಿನಂತಿಸಿದರು.

ಅದರಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸಿ ಜಿಲ್ಲೆಯಲ್ಲಿ ನರೇಗಾ ಯೋಜನೆಯಡಿ ಕಾಮಗಾರಿಗಳನ್ನು ಒಗ್ಗೂಡಿಸುವಿಕೆಯಲ್ಲಿ ಬಹಳ ಹಿಂದೆ ಬಿದ್ದಿದೆ ಅದರಲ್ಲೂ MACD, ಅಂಗನವಾಡಿ ಮತ್ತು ಕೃಷಿಹೊಂಡಗಳ ನಿರ್ಮಾಣ, ಕಾಮಗಾರಿಗಳ ಪ್ರಗತಿ, ಅತ್ಯಂತ ಕುಂಠಿತವಾಗಿರುವುದನ್ನು ಗಮನಿಸಿ ತೀವ್ರ ಅಸಮದಾನ ವ್ಯಕ್ತಪಡಿಸುತ್ತಾ, ಇಲಾಖಾವಾರು ಸಾಧಿಸಿರುವ ಪ್ರಗತಿಯ ವಿವರವನ್ನು ಸಭೆಗೆ ನೀಡುವಂತೆ ಅಧಿಕಾರಿಗಳಿಗೆ ತಿಳಿಸಿದರು.

ತಾಲ್ಲೂಕುವಾರು ಆರ್ಥಿಕ ಪ್ರಗತಿಯನ್ನು ಪರಿಶೀಲಿಸುತ್ತಾ, ಗುಬ್ಬಿ ರೂ.2.309ಲಕ್ಷ ಬಿಲ್ ಪಾವತಿಗೆ ಬಾಕಿ ಇರುವುದರಿಂದ ಈ ದಿನವೇ ಕ್ಲೀಯರ್ ಮಾಡಲು ಕಾರ್ಯಪಾಲಕ ಇಂಜಿನಿಯರ್‌ರವರಿಗೆ ತಿಳಿಸಿದರು; ಕೊರಟಗೆರೆ ತಾಲ್ಲೂಕಿನಲ್ಲಿ ರೂ.63,000/– ಬಾಕಿ ಇದ್ದು ಎಫ್.ಟಿ.ಒ.ಜನರೇಟ್ ಮಾಡಿರುವುದಿಲ್ಲ; ಕೂಡಲೇ ಎಫ್.ಟಿ.ಒ.ಜನರೇಟ್ ಮಾಡಿ ಬಿಲ್ ಕ್ಲೀಯರ್ ಮಾಡಲು ತಿಳಿಸಲಾಯಿತು; ಚಿ.ನಾ.ಹಳ್ಳಿ ತಾಲ್ಲೂಕಿನಲ್ಲಿ ರೂ.1.15ಲಕ್ಷ ಬಾಕಿ ಇರುತ್ತದೆ; ಕುಣಿಗಲ್ ತಾಲ್ಲೂಕಿನಲ್ಲಿ ರೂ.2.89ಲಕ್ಷ ಬಾಕಿ ಇದ್ದು ಕೂಡಲೇ ಪಾವತಿಗೆ ಕ್ರಮವಹಿಸಲು ತಿಳಿಸಲಾಯಿತು; ಮಧುಗಿರಿ ತಾ: ರೂ.2.04ಲಕ್ಷ, ಪಾವಗಡ 14.72ಲಕ್ಷ, ಶಿರಾ ರೂ.4.61ಲಕ್ಷ, ತುಮಕೂರು ರೂ.0.92ಲಕ್ಷ ಬಾಕಿ ಇರುತ್ತದೆ ಎಂದು ಸಭೆಗೆ ತಿಳಿಸಿದಾಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ದಿನಾಂಕ:16–01–2017ರೊಳಗೆ ಎಲ್ಲವನ್ನು ಕ್ಲೀಯರ್ ಮಾಡಲು ತಿಳಿಸಿದರು.

**ನರೇಗಾ ಒಗ್ಗೂಡಿಸುವಿಕೆ ಕಾರ್ಯಕ್ರಮ:**

**1) ರೇಷ್ಮೆ ಇಲಾಖೆ:**

ರೇಷ್ಮೆ ಪ್ರಗತಿ ವಿವರವನ್ನು ಉಪ ನಿರ್ದೇಶಕರು ನೀಡಿದ್ದು, ಹೆಚ್ಚಿನ ಪ್ರಗತಿ ಸಾಧಿಸಲು ಸೂಚಿಸಲಾಯಿತು. ಮುಂದಿನ ವರ್ಷಕ್ಕೆ ಈಗಲೇ ಕಾರ್ಯಕ್ರಮ ರೂಪಿಸಿಕೊಳ್ಳುವಂತೆ ತಿಳಿಸಿದಾಗ ರೂ.61.00ಲಕ್ಷದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ; ಎಲ್ಲಾ ಇಲಾಖೆಯವರು ನರೇಗಾ ಒಗ್ಗೂಡಿಸುವಿಕೆ ಕಾರ್ಯಕ್ರಮದಲ್ಲಿ 2017-18ನೇ ಸಾಲಿನ ಕ್ರಿಯಾ ಯೋಜನೆಯನ್ನು ಮಾರ್ಚ್-2017ರ ಮಾಹೆಯಲ್ಲಿ ಸಿದ್ಧಪಡಿಸಿ ಅನುಮೋದನೆ ಪಡೆದು ಏಪ್ರಿಲ್-2017ರಂದು ಎನ್.ಎಂ.ಆರ್. ತೆಗೆದು ಕಾರ್ಯಕ್ರಮ ಅನುಷ್ಠಾನಗೊಳಿಸಲು ತಿಳಿಸಲಾಯಿತು.

**2) ತೋಟಗಾರಿಕೆ ಇಲಾಖೆ:**

ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆರವರು ಮಾತನಾಡಿ, ವಾರ್ಷಿಕ ಗುರಿ 1496 ನಿಗಧಿಯಾಗಿದ್ದು ಈವರೆಗೆ 939 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ; ಮತ್ತು 1032 ಕಾಮಗಾರಿಗಳು ಪ್ರಾರಂಭವಾಗಿರುತ್ತದೆ ಎಂದು ಸಭೆಗೆ ತಿಳಿಸುತ್ತಾ, 69437 ಮಾನವದಿನ ಸೃಜನೆಯಾಗಿರುತ್ತದೆ ಎಂದು ತಿಳಿಸಿದರು. ಮುಂದುವರೆದು ರಾಜ್ಯವಲಯ ಕಾರ್ಯಕ್ರಮಗಳ ಹಾಗೂ ಜಿಲ್ಲೆಯ ಕ್ಷೇತ್ರ ಮತ್ತು ಸಸ್ಯಾಗಾರಗಳ ಪ್ರಗತಿಯ ಬಗ್ಗೆ ಸಭೆಗೆ ವಿವರಿಸಿದರು.

ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರು ಮಾತನಾಡಿ, ಕೊರಟಗೆರೆ ಮತ್ತು ತುರುವೇಕೆರೆ ತಾಲ್ಲೂಕುಗಳ ಶೇಕಡವಾರು ಪ್ರಗತಿಯೂ ಬಹಳ ಕುಂಠಿತವಾಗಿರುತ್ತದೆ; ನಿಗಧಿತ ಗುರಿ ಸಾಧಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.

**3) ಕೃಷಿ & ಜಲಾನಯನ ಇಲಾಖೆ:**

ಜಂಟಿ ನಿರ್ದೇಶಕರು, ಕೃಷಿ ಇಲಾಖೆರವರು ಮಾತನಾಡಿ, ಈವರೆಗೆ 449 ಕಾಮಗಾರಿಗಳು ಪ್ರಾರಂಭವಾಗಿರುತ್ತವೆ; 23666 ಮಾನವ ದಿನ ಸೃಜನೆಯಾಗಿರುತ್ತದೆ; 102 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ; 8 ಕೃಷಿಹೊಂಡ ಕಾಮಗಾರಿ ಪ್ರಾರಂಭವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರು ಮಾತನಾಡಿ, ನಮ್ಮ ಜಿಲ್ಲೆಗೆ 16650 ಕೃಷಿಹೊಂಡ ನಿರ್ಮಾಣಕ್ಕೆ ಗುರಿ ನಿಗಧಿಯಾಗಿರುತ್ತದೆ; 225 ಪ್ರಾರಂಭವಾಗಿದ್ದು, 21 ಪೂರ್ಣಗೊಂಡಿರುತ್ತದೆ; ಒಂದೊಂದು ಪಂಚಾಯತಿಗೆ 5 ಕೃಷಿಹೊಂಡ ನಿರ್ಮಾಣ ಕಾರ್ಯ ಕೈಗೊಳ್ಳಬಹುದು ಹಾಗೂ ಭಾರತ ಸರ್ಕಾರ ಕೃಷಿಹೊಂಡಕ್ಕೆ ಹೆಚ್ಚು ಆದ್ಯತೆ ನೀಡಲು ತಿಳಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, ಕೃಷಿ ಇಲಾಖೆಯಲ್ಲಿ ಉತ್ತಮ ಪ್ರಗತಿ ಸಾಧಿಸುವಂತೆ ತಿಳಿಸುತ್ತಾ, ತಪ್ಪಿದ್ದಲ್ಲಿ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲವೆಂದು ಗುರಿ ವಾಪಸಾತಿಗೆ ಕ್ರಮವಹಿಸಲು ತಿಳಿಸಿದರು; ನಿಗಧಿ ಪಡಿಸಿದ ಗುರಿಯಲ್ಲಿ ಶೇಕಡ 1 ರಷ್ಟು ಸಹಾ ಪ್ರಗತಿ ಸಾಧಿಸಿಲ್ಲ; ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ತಾಲ್ಲೂಕುವಾರು ಪ್ರಗತಿಯ ವಿವರವನ್ನು ಸಭೆಯಲ್ಲಿ ಪರಾಮರ್ಶಿಸಲಾಗಿ, ಕೆಲವು ತಾಲ್ಲೂಕುಗಳ ಪ್ರಗತಿಯೂ ಶೀರಾ ಕುಂಠಿತವಾಗಿರುವುದನ್ನು ಗಂಭೀರವಾಗಿ ಪರಿಗಣಿಸಿ, ಮುಂದಿನ ಒಂದುವರೆ ತಿಂಗಳೊಳಗೆ ಪ್ರತಿ ತಾಲ್ಲೂಕಿನಲ್ಲಿಯೂ ಕನಿಷ್ಠ 100 ಕೃಷಿಹೊಂಡ ನಿರ್ಮಾಣ ಮಾಡಲು ಕ್ರಮವಹಿಸುವಂತೆ ತಿಳಿಸಿ ಈ ತಿಂಗಳ ಅಂತ್ಯದೊಳಗೆ ನಿಗಧಿಪಡಿಸಿದ ಗುರಿ ಸಾಧಿಸಲು ಸೂಚಿಸಿದರು.

ಉಪ ಕಾರ್ಯದರ್ಶಿ (ಅಭಿವೃದ್ಧಿ) ರವರು ಮುಂದಿನ ವರ್ಷದಲ್ಲಿ ಕೃಷಿ ಇಲಾಖೆಯಡಿ ನರೇಗಾ ಒಗ್ಗೂಡಿಸುವಿಕೆ ಕಾರ್ಯಕ್ರಮದಲ್ಲಿ ಪ್ರತಿ ತಾಲ್ಲೂಕಿನಲ್ಲಿ 2-2 Micro Watershed ನಿರ್ಮಾಣಕ್ಕೆ ಕ್ರಿಯಾ ಯೋಜನೆ ಸಿದ್ಧಪಡಿಸಿ, ಜಿ.ಪಂ.ನಿಂದ ಅನುಮೋದನೆ ಪಡೆದು, ದಿನಾಂಕ:10-04-2017ರಂದು ಪ್ರಾರಂಭ ಮಾಡಲು ಕ್ರಮಕೈಗೊಳ್ಳುವಂತೆ ತಿಳಿಸಿದರು. ಮುಂದುವರೆದು ವರ್ಮಿ ಕಾಂಪೋಸ್ಟ್ ಪ್ರಗತಿಯನ್ನು ಪರಿಶೀಲಿಸಲಾಗಿ, 59 ವರ್ಮಿ ಕಾಂಪೋಸ್ಟ್ ಆಗಿದ್ದು, ಶಿರಾ ತಾಲ್ಲೂಕಿನಲ್ಲಿ 110 ಗುರಿ ನಿಗಧಿಯಾಗಿದ್ದು 61 ಮಾತ್ರ ಗುರಿ ಸಾಧಿಸಲಾಗಿದೆ; ಆದುದರಿಂದ ಬಾಕಿ ಇರುವ ಗುರಿಯನ್ನು ಈ ತಿಂಗಳ ಅಂತ್ಯದೊಳಗೆ ಸಾಧಿಸಲು ತಿಳಿಸಲಾಯಿತು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು/ಎಲ್ಲಾ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು)**

**4) ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ:**

ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು ರವರು ಮಾತನಾಡಿ, Multy Arch Check Dam 72 ಕಾಮಗಾರಿಗಳಿಗೆ ಮುಖ್ಯ ಇಂಜಿನಿಯರ್‌ರವರಿಂದ ಅನುಮೋದನೆಯಾಗಿರುತ್ತದೆ; 31 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ; ಒಂದೊಂದು ಕಾಮಗಾರಿಗೆ ಒಂದು ತಿಂಗಳು ಕಾಲಾವಕಾಶ ಬೇಕಾಗುತ್ತದೆ ಎಂದು ತಿಳಿಸಿ, ತಾಲ್ಲೂಕುವಾರು ವಿವರ ನೀಡಿದರು.

ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರು ಮಾತನಾಡಿ, ಈ ತಿಂಗಳ ಅಂತ್ಯದಲ್ಲಿ 100 Multy Arch Check Dam ಕಾಮಗಾರಿಗಳನ್ನು ಪೂರ್ಣಗೊಳ್ಳಲು ಕ್ರಮವಹಿಸುವಂತೆ ಹಾಗೂ ಮಾರ್ಚ್ ಅಂತ್ಯದೊಳಗೆ ಅಂಗನವಾಡಿ ಕಟ್ಟಡಗಳನ್ನು ಪೂರ್ಣಗೊಳಿಸಲು ತಿಳಿಸಿದರು. ಮುಂದುವರೆದು ಪಾವತಿಗೆ ಬಾಕಿ ಇರುವ ಬಿಲ್‌ಗಳನ್ನು ಕೂಡಲೇ ಕ್ಲೀಯರ್ ಮಾಡಲು ತಿಳಿಸಿ, ಇಲ್ಲದಿದ್ದರೆ 15-20ದಿವಸ ನೋಡಿ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ದಂಡ ಹಾಕಲಾಗುವುದು ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕೂಡಲೇ Multy Arch Check Dam ಪ್ರಾರಂಭಿಸಲು ಕ್ರಮವಹಿಸುವಂತೆ ಹಾಗೂ ಪ್ರಗತಿಯ ವರದಿಯನ್ನು ವಾರಕೊಮ್ಮೆ ನೀಡುವಂತೆ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು ರವರಿಗೆ ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್‌ರವರು ಮಾತನಾಡಿ, 233 ಅಂಗನವಾಡಿ ಕಾಮಗಾರಿಗಳಿಗೆ ಅನುಮೋದನೆಯಾಗಿರುತ್ತದೆ; 35 ಕಾಮಗಾರಿಗಳು ಪ್ರಾರಂಭವಾಗಿರುತ್ತದೆ; ಕಾಮಗಾರಿ ಬದಲಾವಣೆಗೆ ತುಮಕೂರು & ಕುಣಿಗಲ್ ತಾಲ್ಲೂಕಿನ ಸಿ.ಡಿ.ಪಿ.ಓ.ರವರು ಕೇಳುತ್ತಿದ್ದಾರೆ ಎಂದು ಸಭೆಯ ಗಮನಕ್ಕೆ ತಂದಾಗ, ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರು ಕಾಮಗಾರಿ ಬದಲಾವಣೆ ಮಾಡಲು

ಉಪ ನಿರ್ದೇಶಕರು, ಮಹಿಳಾ & ಮಕ್ಕಳ ಅಭಿವೃದ್ಧಿ ಇಲಾಖೆಯವರಿಗೆ ಅಧಿಕಾರ ಇರುತ್ತದೆ ಎಂದು ತಿಳಿಸಿದರು.

ಕೊಳವೆಬಾವಿ ಮರುಪೂರಣ ಮಾಡುವುದನ್ನು ಇ.ಇ/ಎ.ಇ.ಇ.ರವರು ಮತ್ತೊಮ್ಮೆ ಪರಿಶೀಲಿಸಬೇಕು; ತಾಲ್ಲೂಕಿನಲ್ಲಿ ಒಂದೊಂದು ಕಾಮಗಾರಿಯನ್ನಾದರೂ ಪರಿಶೀಲಿಸುವಂತೆ ತಿಳಿಸಿದರು.

ಪಿ.ಎಂ.ಜಿ.ಎಸ್.ವೈ. ರಸ್ತೆ ಕಾಮಗಾರಿಗಳ ನಿರ್ವಹಣೆಯನ್ನು ನರೇಗಾ ಒಗ್ಗೂಡಿಸುವಿಕೆ ಕಾರ್ಯಕ್ರಮದಲ್ಲಿ ಮಾಡಬಹುದು; 3054 ಅಡಿ ಶೇ.50 ಇದೆ ಎಂದು ಇ.ಇ.ರವರು ತಿಳಿಸಿದರು. ಮುಖ್ಯ ಇಂಜಿನಿಯರ್ ರವರು ಮಾನ್ಯ ಆಯುಕ್ತರು, ನರೇಗಾ ದವರೊಂದಿಗೆ ಚರ್ಚೆ ಮಾಡಿ ಅವರಿಗೆ ತಿಳಿಸಿ, ಒಗ್ಗೂಡಿಸುವಿಕೆಯ ಶೇ.50ರಷ್ಟು ನರೇಗಾದಲ್ಲಿ ಇನ್ನು ಉಳಿದ ಶೇ.50ರಷ್ಟನ್ನು ಇಲಾಖೆಯಡಿ ಮಾಡಬಹುದು; ನರೇಗಾದಡಿ ಮಾಡಿದಾಗ efms ಮುಖಾಂತರ ಪೇಮೆಂಟು ಮಾಡಬಹುದು ಎಂದು ತಿಳಿಸಿದರು. , ಕೂಲಿ, ಜಲ್ಲಿ ಕಲ್ಲುಗಳ ವೆಚ್ಚವನ್ನು ನರೇಗಾದಲ್ಲೂ ಯಂತ್ರೋಪಕರಣದ ವೆಚ್ಚವನ್ನು ಇಲಾಖಾ ವತಿಯಿಂದ ಭರಿಸಬಹುದು ಎಂದು ತಿಳಿಸಲಾಯಿತು.

ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರು ಮಾತನಾಡಿ, ಕಳೆದ 5 ವರ್ಷಗಳಿಂದ ಸತತವಾಗಿ ನಮ್ಮ ಜಿಲ್ಲೆ ಬರಗಾಲಕ್ಕೆ ತುತ್ತಾಗುತ್ತಿದೆ; ಅದರಲ್ಲೂ ಪಾವಗಡ, ಶಿರಾ, ಮಧುಗಿರಿ ತಾಲ್ಲೂಕುಗಳು ಬರದಿಂದ ತತ್ತರಿಸುತ್ತಿದ್ದು ಅಲ್ಲಿ ಯಾವ ಬೆಳೆಯೂ ಬೆಳೆಯಲು ಸಾಧ್ಯವಾಗುತ್ತಿಲ್ಲ; ಇದರಿಂದ ರೈತಾಪಿ ವರ್ಗದವರು ಬಹಳ ಸಮಸ್ಯೆ ಎದುರಿಸುತ್ತಿದ್ದಾರೆ. ಬರ ಎದುರಿಸಲು ಯಾವ-ಯಾವ ಪ್ರದೇಶದಲ್ಲಿ ಯಾವ ಬೆಳೆ ಬೆಳೆದರೆ ಉಪಯೋಗವಾಗುತ್ತದೆ ಎಂಬುದರ ಬಗ್ಗೆ ಒಂದು Innovative Programme ಮಾಡಬೇಕು; ಸಣ್ಣ/ಅತಿ ಸಣ್ಣ ರೈತರು, ಪಂ.ಜಾ./ಪ.ಪಂ, ಬಿ.ಪಿ.ಎಲ್. ಕುಟುಂಬಗಳಿಗೆ ಗ್ರಾಮ ಪಂಚಾಯತಿವಾರು ಸಮೀಕ್ಷೆ ಮಾಡಿ, ತೋಟಗಾರಿಕೆ ಬೆಳೆಗಳು, ರೇಷ್ಮೆ ವಿಸ್ತರಣೆ, ಅರಣ್ಯ, ಹೆಬ್ಬೇವು, ಸಿಲ್ವರ್, ಟೀಕ್ ಮರಗಳನ್ನು ಮುಂದಿನ ಸಾಲಿನಲ್ಲಿ ಗ್ರಾಮ ಪಂಚಾಯತಿವಾರು ನಮೂನೆಯಲ್ಲಿ ರೈತರಿಂದ ಬೇಡಿಕೆ ಪಡೆದು ವಾಸ್ತವಿಕ ಬೇಡಿಕೆಯನ್ನು 30 ದಿವಸದೊಳಗೆ ಸಲ್ಲಿಸಲು ಕ್ರಮವಹಿಸುವಂತೆ ತಿಳಿಸಲಾಯಿತು. ಈ ಬಗ್ಗೆ ಒಂದು ಕಾರ್ಯಾಗಾರವನ್ನು ಮಾಡಬಹುದು; ಕಡೆಪಕ್ಷ 5 ತಾಲ್ಲೂಕುಗಳನ್ನಾದರೂ ಬರದಿಂದ ತತ್ತರಿಸುತ್ತಿರುವುದನ್ನು ಪಾರು ಮಾಡಬಹುದು; ಹೆಬ್ಬೇವು, ಹುಣಸೆ, ಮಾವು, ಸಿಲ್ವರ್, ಟೀಕ್, ಗಿಡ-ಮರಗಳನ್ನು ಬೆಳೆಸಿದರೆ ಆ ಭಾಗದ ಜನರಿಗೆ ಉಪಯೋಗವಾಗುತ್ತದೆ; ಈ ಬಗ್ಗೆ ಕೃಷಿ ಇಲಾಖೆಯವರು ಮಾಹಿತಿ ನೀಡಿದರೆ ಮುಂದಿನ ವರ್ಷದಲ್ಲಿ ಸುಮಾರು 20 ರಿಂದ 30 ಸಾವಿರ ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿ ಪಡಿಸಬಹುದು ಎಂದು ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸಾಂಪ್ರದಾಯಿಕ ಗಿಡ/ಮರಗಳನ್ನು ಬೆಳೆಯಬಹುದು; ವಿವಿಧ ಜಾತಿಯ ಸಸ್ಯಗಳಿವೆ; ಅರಣ್ಯ ಇಲಾಖಾಧಿಕಾರಿಗಳು ಮಾಹಿತಿ ನೀಡಬೇಕು; ಎಲ್ಲೆಲ್ಲಿ ಬೆಳೆ ಬೆಳೆಯುವುದಕ್ಕೆ ಭೂಮಿ ಯೋಗ್ಯವಿಲ್ಲವೋ ಅಲ್ಲಿಯ ಕೃಷಿ ಭೂಮಿಯಲ್ಲಿ ಹೆಬ್ಬೇವು, ಮಾವು, ಹುಣಸೆ, ಸಿಲ್ವರ್, ಟೀಕ್ ಮರಗಳನ್ನು ಬೆಳೆಸುವಂತೆ ಕ್ರಮ ಕೈಗೊಳ್ಳಲು ತಿಳಿಸಿದರು.

ಮುಂದುವರೆದು ತೋಟಗಾರಿಕೆ ಇಲಾಖೆಯವರು Suggest ಮಾಡಿ, ಸಸಿಗಳನ್ನು ಅರಣ್ಯ ಇಲಾಖಾವತಿಯಿಂದ ವಿತರಣೆ ಮಾಡಬೇಕು; ಈ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು; ಆದುದರಿಂದ ಈಗಿನಿಂದಲೇ Plan of Action ಮಾಡಬೇಕು; ಕೃಷಿ ಮತ್ತು ತೋಟಗಾರಿಕೆ ಇಲಾಖೆಯವರು

ಗುರುತರ ಜವಾಬ್ದಾರಿ ಹೊಂದಬೇಕು; ಹೀಗೆ ಮಾಡಿ ಶಾಶ್ವತ ಆಸ್ತಿಯು ಸಹ ಸೃಜನೆಯಾಗುತ್ತಿದೆ ಎಂದು ತಿಳಿಸಿದರು.

**(ಕ್ರಮ: ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು/ಅರಣ್ಯ ಉಪ ಸಂರಕ್ಷಣಾಧಿಕಾರಿಗಳು/ಸಹಾಯಕ ಕೃಷಿ ನಿರ್ದೇಶಕರು/ಸಹಾಯಕ ತೋಟಗಾರಿಗಾ ನಿರ್ದೇಶಕರು)**

ಚರ್ಚಿಸತಕ್ಕ ವಿಷಯಗಳು ಮುಕ್ತಾಯವಾದ್ದರಿಂದ ಯೋಜನಾ ಅಭಿಯಂತರು, ಜಿ.ಪಂ.ತುಮಕೂರು ಇವರು ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಉಪ-ಕಾರ್ಯದರ್ಶಿಗಳು ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ತುಮಕೂರು

ಪ್ರತಿಯನ್ನು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಕಳುಹಿಸುತ್ತಾ, ಅಗತ್ಯ ಅನುಪಾಲನಾ ವರದಿಯನ್ನು ತಕ್ಷಣವೇ ಸಲ್ಲಿಸಲು ಸೂಚಿಸಿದೆ.